**ದಿನಾಂಕಃ 07.02.2025 ರಂದು ಸಾಕ್ಷಿದಾರರು ಹಾಜರಿದ್ದು, ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀಮತಿ ಎಸ್.ಆರ್. ವಕೀಲರಿಂದಃ–**

ನಾನು ಈ ಪ್ರಕರಣದಲ್ಲಿ 1 ನೇ ವಾದಿಯಾಗಿರುತ್ತೇನೆ. ಈ ದಿನ ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಪ್ರಮಾಣ ಪತ್ರ ಸಲ್ಲಿಸಿದ್ದು, ಅದರಲ್ಲಿರುವ ಅಂಶಗಳು ಸತ್ಯವಾಗಿದ್ದು, ಅವುಗಳನ್ನು ನಾನೇ ಹೇಳಿ ಬರೆಸಿದ್ದೇನೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ. ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ. ನಾನು 2 ನೇ ವಾದಿಯ ಪರವಾಗಿಯೂ ಸಹ ಸಾಕ್ಷ್ಯನುಡಿಯುತ್ತಿದ್ದೇನೆ.

ಈ ದಿನ ನಾನು ನ್ಯಾಯಾಲಯದ ಮುಂದೆ ಸಲ್ಲಿಸಿರುವ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ನನ್ನ ಪರವಾಗಿ ನಿಶಾನೆಗೊಳಿಸಬೇಕೆಂದು ನಿವೇದಿಸಿಕೊಳ್ಳುತ್ತೇನೆ.

| **ಕ್ರ.ಸಂಖ್ಯೆ** | **ದಾಖಲೆಗಳ ವಿವರ** | **ನಿಶಾನೆಗಳು** |
|---|---|---|
| 1. | ಪಹಣಿ ಪತ್ರಿಕೆ | ನಿ.ಪಿ–1 |
| 2. | ದಿನಾಂಕಃ08.08.2022 ರ ಸ್ವಾಧೀನರಹಿತ ಜಮೀನಿನ ನೋಂದಾಯಿತ ಕ್ರಯದ ಕರಾರು ಪತ್ರ | ನಿ.ಪಿ–2 |
| 3. | ಋಣಭಾರ ರಾಹಿತ್ಯ ಪ್ರಮಾಣ ಪತ್ರದ ಆನ್‌ಲೈನ್ ಧೃಢೀಕೃತ ಪ್ರತಿ | ನಿ.ಪಿ–3 |
| 4. | ಆಸ್ತಿಯ ಮತ್ತು ಕಟ್ಟದ ಮೌಲ್ಯಮಾಪನಾ ವರದಿ | ನಿ.ಪಿ–4 |
| 5. | ಲೀಗಲ್ ನೋಟೀಸ್ ಕಛೇರಿ ಪ್ರತಿ | ನಿ.ಪಿ–5 |
| 6. | 1 ನೇ ವಾದಿಯ ಉಳಿತಾಯ ಖಾತೆಯ ಸ್ಟೇಟ್‌ಮೆಂಟ್ | ನಿ.ಪಿ–6 |

**ಮುಂದುವರಿದ ಮುಖ್ಯ ವಿಚಾರಣೆಗೆ ವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಅವಕಾಶ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತ ಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹಿರಿಯೂರು.